

ಬ್ರಹ್ಮೋತ್ಸವಗಳಲ್ಲಿ ಬಾಲ ಕಳಾಕಾರರು


ತಿರುಮಲ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಏಪ್ರಿಲ್ 2020

ಸಪ್ತಗಿರಿ ಅನುಬಂಧ



ಶ್ರೀ ರಾಮ ಜಯ ರಾಮ ಜಯ ಜಯ ರಾಮ

ತಿರುಮಲ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

'ಸಪ್ತಗಿರಿ' ಅನುಬಂಧ






**ಏಪ್ರಿಲ್ - 2020**

**ಸಂಪುಟ - 01**

**ಸಂಚಿಕೆ - 02**



## ವಿಷಯ ಸೂಚಿಕೆ



| | | ಪುಟ |
|---|---|---|
| ಹಿಂದೂ ದೇವರು | ಅಂಜನೇಯ<br>-ಶ್ರೀಮತಿ. ಬಿ. ಪದ್ಮಜ | 04 |
| ಹನ್ನೆರಡು ಆಳ್ವಾರರು | ಪೂದತ್ತಾಳ್ವಾರ್<br>- ಶ್ರೀಮತಿ. ಡಾ|| ಸಿ.ಎಸ್. ಊರ್ಮಿಳಾ | 06 |
| ಕನ್ನಡ ಹರಿದಾಸವರೇಣ್ಯರು | ಶ್ರೀ ಪಾದರಾಜರು<br>- ಶ್ರೀಮತಿ. ಸುಧಾಮಧುಸೂದನ್ | 08 |
| ಚಿತ್ರಕಥೆ | ಗಡ್ಡಾರಿ ಮಾಡಿದ ಗಾಯ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಕೆ. ದ್ವಾರಕನಾಥ್ | 10 |
| ಬಾಲನೀತಿ | ಪರೋಪಕಾರ<br>- ಕೆ. ನರಸಿಂಹ ಮೂರ್ತಿ | 14 |
| ಪ್ರಜ್ಞಾವಂತ ಬಾಲಕ | | 16 |
| ಕ್ವಿಜ್ | - ಶ್ರೀಮತಿ. ಸೂರ್ಯವಂಶಿ | 17 |
| ಚಿತ್ರಲೇಖನ | | 18 |


ಮುಖಚಿತ್ರ - ಶ್ರೀ ಕೋದಂಡರಾಮ ಸ್ವಾಮಿಯವರು

ಹಿಂಬದಿಚಿತ್ರ - ಬಾಲಾಂಜನೇಯನು

ಹಿಂದೂ ದೇವರುಗಳು

# ಆಂಜನೇಯ



**– ಶ್ರೀಮತಿ. ಬಿ. ಪದ್ಮಜ**

ನಮ್ಮ ಹಿಂದೂ ದೇವರುಗಳಲ್ಲಿ ಎಲ್ಲರಿಗೂ ಅತ್ಯಂತ ಪ್ರಿಯವಾದ ದೇವನೆಂದರೆ ಈ ರಾಮಭಕ್ತ ಹನುಮಂತ. ಅವನನ್ನು ಎಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಪೂಜಿಸುತ್ತಲೇ ಇರುತ್ತಾರೆ.

ಮಕ್ಕಳೇ! ಇಂದು ನಾವು ಅಂಜನೇಯನ ಬಗೆಗೆ ತಿಳಿದು ಕೊಳ್ಳೋಣ. ಸಾಮಾನ್ಯವಾಗಿ ಮಕ್ಕಳಿಗೂ ಅಂಜನೇಯನೆಂದರೆ ಬಹಳ ಇಷ್ಟ. ಏಕೆಂದರೆ ಆತ ಧೈರ್ಯವನ್ನು, ಆರೋಗ್ಯವನ್ನು ನೀಡುತ್ತಾನೆ.

ಅಂತಹಾ ಆಂಜನೇಯನನ್ನು ಹನುಮಂತ, ವಾಯುಪುತ್ರ ಅಂಜನೀಪುತ್ರ, ರಾಮಭಕ್ತ, ರಾಮಭಂಟ, ಹೀಗೇ ಇನ್ನೂ ಅನೇಕ ಹೆಸರುಗಳಿಂದ ಕರೆಯುತ್ತೇವೆ.

ಆತ ಅಂಜನಿ ಪುತ್ರನಾದ್ದರಿಂದ ಆಂಜನೇಯ ಎಂದು ಕರೆಯಲ್ಪಡುತ್ತಿದ್ದಾನೆ.

ಅವನ ತಾಯಿ ಅಂಜನಾದೇವಿ ಹದಿಮೂರು ವರ್ಷಗಳ ಕಾಲ ವಾಯು ದೇವರನ್ನು ಕುರಿತು ತಪಸ್ಸನ್ನು ಆಚರಿಸಿದಳು. ಅವಳ ತಪಸ್ಸಿಗೆ ಮೆಚ್ಚಿದ ವಾಯು ದೇವನು ಅವಳಿಗೆ ಒಂದು ಹಣ್ಣನ್ನು ನೀಡಿ ಅದನ್ನು ತಿನ್ನಬೇಕೆಂದು ಹೇಳಿದ. ಅದನ್ನು ತಿಂದ ಮೇಲೆ ಹನುಮಂತನು ಜನಿಸಿದ. ಅವನು ಬಾಲ್ಯದಲ್ಲಿ ಬಹಳ ಚೇಷ್ಟೆ ಮಾಡುತ್ತಿದ್ದ, ಒಮ್ಮೆ ಸೂರ್ಯನನ್ನೇ ಕಿತ್ತಳೆ ಹಣ್ಣೆಂದು ಭಾವಿಸಿ ನುಂಗಲೂ ಹೊರಟಿದ್ದ. ಆದ್ದರಿಂದ ಮಕ್ಕಳು ಏನಾದರೂ ತಡೆಯಲಾರದ ಚೇಷ್ಟೆ ಮಾಡುತ್ತಿದ್ದರೆ ಕಪಿಚೇಷ್ಟೆ ಮಾಡ ಬೇಡ ಎಂದು ಹಿರಿಯರು ಗದರಿಸುತ್ತಾರೆ.


ಆತ ಎಷ್ಟೇ ಚೇಷ್ಟೆ ಮಾಡಿದರೂ ಬಹಳ ಬುದ್ಧಿವಂತ. ಹಾಗೆಯೇ ರಾಮನನ್ನು ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಭಜಿಸುತ್ತಿದ್ದ. ಹಾಗೆಯೇ ವಾನರ ರಾಜನಾದ ಸುಗ್ರೀವನ ಆಪ್ತ ಮಿತ್ರನಾಗಿದ್ದ.

ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತಾ ಋಷ್ಯಮೂಕ ಎಂಬ ಪರ್ವತದ ಬಳಿಗೆ ಬಂದರು. ಅವರನ್ನು ದೂರದಿಂದಲೇ ಗಮನಿಸಿದ ಸುಗ್ರೀವ, ಅವರು ಯಾರು? ಅವರ ವಿವರಗಳನ್ನು ತಿಳಿದುಕೊಂಡು ಬರುವಂತೆ ಹನುಮನನ್ನು ಕಳಿಸಿದ. ಹನುಮಂತನು ಬ್ರಾಹ್ಮಣನ ವೇಷವನ್ನು ಧರಿಸಿ ಅವರ ವಿವರಗಳನ್ನು ತಿಳಿದುಕೊಂಡು, ತನ್ನ ಸ್ವಾಮಿ ಶ್ರೀರಾಮನೇ ಬಂದಿರುವ ವಿಷಯ ತಿಳಿದುಕೊಂಡು ಸಂತೋಷದಿಂದ ತನ್ನ ನಿಜ ರೂಪವನ್ನು ಧರಿಸಿ ಅವರನ್ನು ತನ್ನ ಹೆಗಲಮೇಲೆ ಹೊತ್ತುಕೊಂಡು ಬಂದ.ನಂತರ ಸುಗ್ರೀವನೊಂದಿಗೆ ಸ್ನೇಹ ಮಾಡಿದ ಶ್ರೀರಾಮನಿಗೆ ಸೀತೆಯನ್ನು ಹುಡುಕಲು ಸಹಾಯ ಮಾಡಿದ.

ಲಂಕೆಯಲ್ಲಿ ರಾವಣನ ವಶದಲ್ಲಿರುವ ಸೀತೆಯನ್ನು ಹುಡುಕುವುದಕ್ಕಾಗಿ ವಿಶಾಲವಾದ ಸಮುದ್ರವನ್ನು ಒಂದೇ ಜಿಗಿತಕ್ಕೆ ಹಾರಿದ. ಹನುಮಂತನ ಇನ್ನೊಂದು ವಿಶೇಷವೆಂದರೆ ಅವನನ್ನು ಯಾರಾದರೂ ಹೊಗಳಿದರೆ ಅವನಿಗೆ ತನ್ನ ಶಕ್ತಿಯ ಅರಿವಾಗುತ್ತದೆ.

ಸಮುದ್ರವನ್ನು ದಾಟುವಾಗ 'ಸಿಂಹಿಕ' ಎಂಬ ರಾಕ್ಷಸಿ ಅವನನ್ನು ತಡೆದು, ತನ್ನ ಬಾಯೊಳಗೆ ಬಂದು ಹೋಗುವಂತೆ ಸವಾಲು ಹಾಕಿದಳು. ಆಗ ಹನುಮನು, ತಾನು ಎಷ್ಟು ಎತ್ತರಕ್ಕೆ ಬೆಳೆದರೆ ಅಷ್ಟು ಅಗಲ ಅವಳು ಬಾಯಿಯನ್ನು ತೆರೆಯಬೇಕೆಂದು ಮರುಸವಾಲು ಹಾಕಿದ. ಅದಕ್ಕೆ ಸಿಂಹಿಕ ಒಪ್ಪಿದಳು. ಅದರಂತೆ ಬೆಳೆಯುತ್ತಾ ಹೋದ. ಅವಳು ಅಷ್ಟೇ ಅಗಲ ಬಾಯಿ ತೆರೆದಳು. ಕೂಡಲೇ ಚಿಕ್ಕ ಆಕಾರವನ್ನು ಹೊಂದಿ ಅವಳ ಬಾಯನ್ನು ಹೊಕ್ಕು,ಹೊರಗೆ ಬಂದು ಅವಳನ್ನು ಕೊಂದ. ಲಂಕೆಗೆ ಹೋದಾಗ ಲಂಕಾ ನಗರನ್ನು ಕಾಯುತ್ತಿದ್ದ ಲಂಕಿಣಿಯನ್ನು ಎದುರಿಸಿ ಅವಳ ಕಿವಿಯಲ್ಲಿ ಅತೀ ಚಿಕ್ಕ ರೂಪದಲ್ಲಿ ಬಲ ಗಿವಿಯಿಂದ  ಎಡಗಿವಿಗೆ, ಎಡಗಿವಿಯಿಂದ ಬಲಗಿವಿಗೆ ನುಸುಳಿ ಅವಳನ್ನು ಸೋಲಿಸಿದ. ಅವನ ಬುದ್ಧಿ ಶಕ್ತಿಗೆ  ಬೆರಗಾಗಿ ಲಂಕಿಣಿ ಅವನನ್ನು ಲಂಕಾನಗರದೊಳಗೆ ಬಿಟ್ಟಳು.

ನಂತರ ಅಶೋಕವನದಲ್ಲಿ ಸೀತಾಮಾತೆಯನ್ನು ಕಂಡು, ರಾಮನು ನೀಡಿದ್ದ ಉಂಗುರವನ್ನು ನೀಡಿ,ರಾಮ ತನ್ನ ಸೈನ್ಯದೊಂದಿಗೆ ಬಂದು ರಾವಣನನ್ನು ಕೊಂದು ಆಕೆಯನ್ನು ಕರೆದು ಕೊಂಡು ಹೋಗುತ್ತಾನೆಂದು ಭರವಸೆ ನೀಡಿದ.




ನಂತರ ಅಲ್ಲೇ ಇದ್ದ ಹಣ್ಣುಗಳನ್ನು ತಿನ್ನಲೆಂದು ಹೋಗಿ, ಅಲ್ಲಿ ಅಸರುರನ್ನು ಕೀಟಲೆ ಮಾಡಿದ. ನಂತರ ಅಲ್ಲಿ ಮರಗಳನ್ನೆಲ್ಲಾ ಬೇರು ಸಹಿತ ಕಿತ್ತೆಸೆದ. ಭಯಗೊಂಡ ದಾನವರು, ರಾವಣನಿಗೆ ದೂರು ನೀಡಿದರು. ಆಗ ರಾವಣನು ತನ್ನ ಮಗನಾದ ಅಕ್ಷಯಕುಮಾರನನ್ನು ಕಳುಹಿಸಿದ. ಹನುಮಂತ ಅವನನ್ನು ಸಂಹರಿಸಿದ. ಈ ಬಾರಿ ರಾವಣನು ತನ್ನ ಹಿರಿಯ ಮಗನಾದ ಇಂದ್ರಜಿತ್ತುವನ್ನು ಕಳಿಸಿದ. ಹನುಮಂತ ಇಂದ್ರಜಿತ್ತು ಬಿಟ್ಟ ಬ್ರಹ್ಮಾಸ್ತ್ರಕ್ಕೆ ಬೆಲೆ ನೀಡಿ ಅದರೊಳಗೆ ಬಂದಿಯಾದ. ರಾವಣನ ಅರಮನೆಯನ್ನೂ ನೋಡಬಹುದೆಂದು ಅವನ ಲೆಕ್ಕವಾಗಿತ್ತು. ನಂತರ ರಾವಣನು ಅವನಿಗೆ ಕುಳಿತುಕೊಳ್ಳಲು ಹೇಳದೇ ಹೋದಾಗ, ತನ್ನ ಬಾಲವನ್ನು ಬೆಳಸಿ ಅದನ್ನೇ ಆಸನವನ್ನಾಗಿ ಮಾಡಿಕೊಂಡು ಕುಳಿತು, ರಾವಣನಿಗೆ ಎಚ್ಚರಿಕೆ ನೀಡಿದ. ಕೋಪಗೊಂಡ ರಾವಣ. ಅವನ ಬಾಲಕ್ಕೆ ಬೆಂಕಿಯಿಡುವಂತೆ ಆಜ್ಞಾಪಿಸಿದ.ಸೇವಕರು ಹನುಮನ ಬಾಲಕ್ಕೆ ಬೆಂಕಿ ಇಡು ತ್ತಿದ್ದಂತೆ ಹನುಮಂತ ಜಿಗಿಯುತ್ತಾ ಲಂಕಾನಗರಕ್ಕೆಲ್ಲಾ ಆ ಬೆಂಕಿಯನ್ನು ಹೊತ್ತಿಸಿದ. ನಂತರ ಸೀತೆಯೂ ಅಲ್ಲೇ ಇರುವುದರ ನೆನಪಾಗಿ, ಪುನಃ ಬಂದು ಸೀತೆಯ ಯೋಗಕ್ಷೇಮವನ್ನು ನೋಡಿಕೊಂಡು ಹೋದ.  ನಂತರ ತನ್ನ ಬಾಲವನ್ನು ಸಮುದ್ರದ ನೀರಿನಲ್ಲಿ ಅದ್ದಿ ಬೆಂಕಿಯನ್ನು ಆರಿಸಿಕೊಂಡ.

ನಂತರ ರಾಮನಿರುವ ಸ್ಥಳಕ್ಕೆ ಹಿಂತಿರುಗಿ ಸೀತೆಯನ್ನು ಕಂಡ ವಿಷಯ. ಹಾಗೇ ಸೀತೆಯು  ಕೊಟ್ಟ ಚೂಡಾಮಣಿಯನ್ನು ರಾಮನಿಗೆ ನೀಡಿ,ಸಂತೋಷಪಡಿಸಿದ.  ರಾಮನಿಗೆ ರಾವಣನನ್ನು ಕೊಲ್ಲುವುದಕ್ಕೆ ಸಹಾಯ ಮಾಡಿದ.ಯುದ್ದದಲ್ಲಿ ಗಾಯಗೊಂಡ ರಾಮ, ಲಕ್ಷ್ಮಣರನ್ನು ಗುಣಪಡಿಸಲು ಸಂಜೀವಿನಿ ಪರ್ವತವನ್ನೇ ಹೊತ್ತು  ತಂದ. ಇಂತಹ ಮಹಾನ್ ಭಕ್ತ ಹನುಮಂತನ ಕಥೆಯನ್ನು ಕೇಳಿದಿರಲ್ಲವೇ ಮಕ್ಕಳೇ ನೀವೂ ಆತನಂತೆ ಸ್ವಾಮಿ ಭಕ್ತಿ, ಹಾಗೇ ಹಿಡಿದ ಕೆಲಸವನ್ನು ಬಿಡದೇ ಮಾಡುವುದು, ಮನಸ್ಸಿದ್ದರೆ ಮಾರ್ಗದಂತಹಾ ಗುಣಗಳನ್ನು ನಿಮ್ಮದಾಗಿಸಿ ಕೊಂಡು ಉತ್ತಮ ಪ್ರಜೆಗಳಾಗಿ.

# ಪೂದತ್ತಾಳ್ವಾರ್



-ಶ್ರೀಮತಿ. ಡಾ॥ ಸಿ.ಎಸ್. ಊರ್ಮಿಳಾ

ಇವರು ದ್ವಾಪರಯುಗದ 862901 ವರ್ಷವಾದ ಸಿದ್ಧಾರ್ಥಿ ಸಂವತ್ಸರ ತುಲಾಮಾಸ ಶುಕ್ಲಪಕ್ಷ ನವಮಿ ಬುಧವಾರ ಧನಿಷ್ಠಾ ನಕ್ಷತ್ರದಲ್ಲಿ ಮಹಾಬಲಿಪುರಂ ಎಂದು ಪ್ರಸಿದ್ಧವಾಗಿರುವ ತಿರುಕ್ಕಡಲ್ ಮಲ್ಲೈ ಎಂಬ ಕ್ಷೇತ್ರದಲ್ಲಿ ಒಂದು ಕೆರೆಯಲ್ಲಿ ಬೆಳದಿದ್ದ ತಾವರೆ ಪುಷ್ಪದಲ್ಲಿ ಆವಿರ್ಭಸಿದರು.

ಹೀಗಾಗಿ ಈ ಮೂವರೂ ಭಗವಂತನ ಕೃಪೆಯಿಂದ ಅಯೋನಿಜರಾಗಿಯೇ ಜನಿಸಿದರು. ಇವರು ಯಾವಾಗಲೂ ಭಗವಂತನ ಧ್ಯಾನ ಮಾಡುತ್ತಾ ಊರಿಂದೂರಿಗೆ ಸಂಚರಿಸುತ್ತಾ ದಿವ್ಯ ಕ್ಷೇತ್ರಗಳ ದೇವಾಲಯಗಳನ್ನು ಸಂದರ್ಶಿಸುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಹೀಗಿರುವಲ್ಲಿ ಈ ಮೂವರು ಆಳ್ವಾರರುಗಳು 'ತಿರುಕ್ಕೋವಲೂರ್' ಎಂಬ ಕ್ಷೇತ್ರದ ಸಮೀಪದಲ್ಲಿ ಬರುವಾಗ ಒಂದು ದಿವಸ ರಾತ್ರಿ ದೊಡ್ಡ ಮಳೆಗೆ ಸಿಕ್ಕಿ ಕೊಂಡರು.

ಅವರಿಗೆ ಎಲ್ಲಿಯೂ ಆಶ್ರಯಸಿಗದೆ, ಊರಿಗೆ ಸಮೀಪದಲ್ಲಿದ್ದ ಒಂದು ಮನೆಯ ದೇಹಳಿಯಲ್ಲಿ (ಜಗುಲಿ) ಒಬ್ಬೊಬ್ಬರಾಗಿ ಬಂದು ಸೇರಿದರು. ಮಳೆ, ಚಳಿ, ಕಾರ್ಗತ್ತಲೆ, ಒಬ್ಬರಿಗೊಬ್ಬರು ಆಸರೆಯಾಗಿಯೇ ನಿಂತಿದ್ದರು. ಭಗವಂತನಿಗೆ ಈ ಮೂವರ ಮಧ್ಯೆ ತಾನೂ ನಿಂತು ಅವರ ಭಕ್ತಿಯ ಅನುಭವಾಮೃತವನ್ನು ಸವಿಯಬೇಕೆಂಬ ಆಸೆ ಉಂಟಾಯಿತು. ಹೀಗಾಗಿ ಭಗವಂತನು ತಾನೂ ಆ ಮೂವರ ಮಧ್ಯೆ ಆವಿರ್ಭವಿಸಿದನು. ಆ ಜಗಲಿಯೇ ಪುಟ್ಟದಾದದು. ಆ ನಾಲ್ಕನೆಯ ಪುರುಷನು ಯಾರೆಂದು ಆ ಕತ್ತಲ್ಲಿನಲ್ಲಿ ತಿಳಿಯಲೇ ಇಲ್ಲ. ಆದ್ದರಿಂದ ಅವರು ತಮ್ಮ ಜ್ಞಾನ ಚಕ್ಷುಸ್ಸಿನಿಂದ ನೋಡತೊಡಗಿದರು. ಮೂವರಿಗೂ ಅವನು ಸರ್ವೇಶ್ವರನಾದ

ಶ್ರೀ ಮನ್ನಾರಮಣನೇ ಎಂದುತಿಳಿಯಿತು.ಆಗ ಒಬ್ಬೊಬ್ಬರಾಗಿ ಆ ಭಗವಂತನನ್ನು ಹಾರೈಸತೊಡಗಿದರು.

ಮೊದಲನೆಯ ಭಕ್ತರಾದ ಪ್ರೊಯ್‌ಹೈ ಆಳ್ವಾರರು, ಈ ಭೂಮಿಯನ್ನೇ ದೀಪದ ಸ್ಥಾಲಿಯನ್ನಾಗಿ (ಹಣತೆ) ಮಾಡಿಕೊಂಡು, ಸಮುದ್ರವನ್ನೇ ಅದಕ್ಕೆ ತುಪ್ಪವನ್ನಾಗಿಯೂ,ಸೂರ್ಯನನ್ನೇ ದೀಪದ ಜ್ವಾಲೆಯನ್ನಾಗಿ ನಿರೂಪಿಸಿಕೊಂಡು ಆ ದಿವ್ಯ ದೀಪದಿಂದ ಭಗವಂತನನ್ನು ಸಾಕ್ಷಾತ್ಕರಿಸಿದರು. ಇವರು 100 ಪದ್ಯಗಳಿಂದ ಭಗವಂತನನ್ನು ಸ್ತುತಿಸಿದ್ದಾರೆ. ಅವರು ಸ್ತುತಿಸಿರುವ ಪಾಶುರ (ಪದ್ಯ) “ವೈಯಮ್ ತಹಳಿಯಾ” ಎಂದು ಆರಂಭವಾಗುತ್ತದೆ.


“ವೈಯಮ್ ತಹಳಿಯಾ, ವಾರ್ ಕಡಲೇನೆಯ್ಯಾಹ ವೆಯ್ಯ ಕದಿರೋನ್ ವಿಳಕ್ಕಾಹ, ಶೆಯ್ಯ ಶುಡರಾಳಿಯನ್ ಅಡಿಕ್ಕೇ ಶೂಟ್ಟಿನೇನ್ ಶೊಲ್ ಮಾಲೈ  ಇಡರಾಳಿ ನೀ ಙ್ಗಹವೇ ಎನ್ಬು ಎಂದು ಸ್ತುತಿಸಿದರು.

ಎರಡನೆಯ ಆಳ್ವಾರ್‌ರಾದ ಪೂದತ್ತಾಳ್ವಾರ್‌ರು ಭಗವಂತನನ್ನು ತಮ್ಮ ಜ್ಞಾನ ಚಕ್ಷುಸ್ಸಿನಿಂದ ನೋಡಿ ಹೀಗೆ ಆನಂದದ ಅನುಭವವನ್ನು ಪಡೆದರು. ಅವರು ಭಕ್ತಿ ಎಂಬ ಸ್ಥಾಲಿಯಲ್ಲಿ (ಹಣತೆ) ಅಂದರೆ ಪ್ರೀತಿಪೂರ್ವಕ ಭಕ್ತಿ  ಋಜಭಾವವೆಂಬ (ಉತ್ಸುಕತೆ) ತುಪ್ಪವನ್ನು ಸುರಿದು ಮನಸ್ಸೆಂಬ ತಿರಿಯನ್ನು ಇಟ್ಟು  ದೀಪವನ್ನು ಹಚ್ಚಿ ಭಗವಂತನನ್ನು ಸಾಕ್ಷಾತ್ಕರಿಸಿದರು. ಅವರು 100 ಪದ್ಯಗಳಿಂದ ಭಗವಂತನನ್ನು ಸ್ತುತಿಸಿದ್ದಾರೆ. ಅವರು ಸ್ತುತಿಸಿರುವ ಪಾಶುರವು “ಅನ್ಬೇತಹಳಿಯಾ” ಎಂದು ಆರಂಭವಾಗುತ್ತದೆ. ಇದೇ ‘ಇರಂಡಾಂ ತಿರುವಂದಾದಿ’

ಅನ್ಬೇತಹಳಿಯಾ, ಆರ್ವಮೇ ನೆಯ್ಯಾಹ
ಇನ್ಬುರುಹು ಶಿನ್ದೈ ಇಡುತಿರಿಯಾ, ನನ್ಬುರುಣಿ
ಜ್ಞಾನ ಚುಡರ್ ವಿಳಕ್ಕೆತ್ತಿನೇನ್ ನಾರಾಣರ್ಕು
ಜ್ಞಾನ ತಮಿಳ್ ಪುರಿಂದನಾನ್
ಎಂದು ಸ್ತುತಿಸಿದರು.

# ಶ್ರೀ ಪಾದರಾಜರು

- ಶ್ರೀಮತಿ ಸುಧಾಮಧುಸೂದನ್



ನರಹರಿತೀರ್ಥರ ನಂತರದಲ್ಲಿ ದಾಸಸಾಹಿತ್ಯದಲ್ಲಿ ಶ್ರೀ ಪಾದರಾಜರೇ ಪ್ರಸಿದ್ಧರಾದ ವ್ಯಕ್ತಿಗಳು. ಶ್ರೀ ಪಾದರಾಜರಿಂದ ದಾಸಸಾಹಿತ್ಯದ ಉನ್ನತಿಯ ಕಾಲ ಆರಂಭವಾಗುವುದು. ನರಹರಿತೀರ್ಥರಾದ ಮೇಲೆ ಒಂದು ಶತಮಾನವಾದ ಮೇಲೆ ಶ್ರೀ ಪಾದರಾಜರಿಂದ ದಾಸಸಾಹಿತ್ಯ ನವ ಚೈತನ್ಯ ಪಡೆಯಿತು. ಇಂದಿಗೂ ದಾಸಪರಂಪರೆಯಲ್ಲಿ ಶ್ರೀ ಪಾದರಾಜರ ಹೆಸರೇ ಮೊದಲಿಗೆ ಗಣಿಸಲ್ಪಡುವುದು ಇವರು ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ ಜನ್ಮ ತಾಳಿದರು.ಬಾಲ್ಯದಲ್ಲಿಯೇ ಉಪನೀತರಾದ ಇವರು ಆಚಾರ್ಯರ ಮೊದಲ ಶಿಷ್ಯರಾದ ಪದ್ಮನಾಭತೀರ್ಥರ ಪರಂಪರೆಯಲ್ಲಿ ಬಂದ ಸ್ವರ್ಣವರ್ಣತೀರ್ಥರಿಂದ ಆಶ್ರಮ ಪಡೆದರು.ಇವರ ಹೆಸರು ಲಕ್ಷ್ಮೀನಾರಾಯಣ ಯೋಗಿಗಳು.ಆಶ್ರಮರಾದ ಮೇಲೆ ಇವರು ಆಚಾರ್ಯರ ಮುಖ್ಯ ಸಂಪ್ರದಾಯದಲ್ಲಿ ಬಂದ ಪ್ರಸಿದ್ಧ ಪಂಡಿತರಾದ ವಿಬುಧೇಂದ್ರ ತೀರ್ಥರಲ್ಲಿ ವಿದ್ಯಾಭ್ಯಾಸ ಮಾಡಿದರು. ಕ್ರಿ.ಶ. 1471 ರ ಸುಮಾರಿಗೆ ವಿಜಯನಗರದ ಸೇನಾಧಿಪತಿಯಾದ ಸಾಳುವನರಸ ತನ್ನ ಚಂದ್ರಗಿರಿಯ ಸಿಂಹಾಸನದಲ್ಲಿ ನಾರಾಯಣ ಯೋಗಿಗಳನ್ನು ಮಂಡಿಸಿ ಮರ್ಯಾದೆ ಮಾಡಿದ. ಸಿಂಹಾಸನವನ್ನು ಹತ್ತಿದ ಶ್ರೀ ಪಾದರಾಜರು ಮುತ್ತಿನ ಕವಚ ತೊಟ್ಟು ರತ್ನದ ಕಿರೀಟ ಇಟ್ಟು, ಕರ್ಣಕುಂಡಲ ಧರಿಸಿ ಗಂಧಲೇಪನ ಮಾಡಿಕೊಂಡಿದ್ದರೆಂದು ಅವರ ಶಿಷ್ಯರಾದ ವ್ಯಾಸರಾಯರು ವರ್ಣನೆ ಮಾಡಿರುವರು.ಉತ್ತರಾದಿ ಮಠದ ರಘುನಾಥ ತೀರ್ಥರು ಇವರ ಪಾಂಡಿತ್ಯಕ್ಕೆ ಬೆರಗಾಗಿ ಇವರನ್ನು 'ಶ್ರೀಪಾದರಾಜ'ರೆಂದು ಸ್ತೋತ್ರ ಮಾಡಿರುವರು. ಸಂಚಾರ ಮುಗಿಸಿಕೊಂಡು ಇವರು



ಮುಳುಬಾಗಿಲಿನಲ್ಲಿ ಹೋಗಿ ನೆಲೆಸಿದರು. ಅಲ್ಲಿಯ ನೃಸಿಂಹ ತೀರ್ಥದಲ್ಲಿ ಭಾಗೀರಥಿಯನ್ನು ತರಿಸಿದರು. ಅಲ್ಲಿ ಇವರು ಶಿಷ್ಯರಿಗೆ ಪಾಠ ಹೇಳುತ್ತಿದ್ದಾಗ ಬಾಲ ಸನ್ಯಾಸಿಗಳಾದ ವ್ಯಾಸರಾಜರು ಇವರಲ್ಲಿ ಬಂದದ್ದು ಬಹುಕಾಲ ಮಧ್ವ ಶಾಸ್ತ್ರ ವ್ಯಾಸಂಗ ಮಾಡಿದರು. ವ್ಯಾಸ ರಾಜರನ್ನು ಅಜಗರವೊಂದು ನುಂಗಲೆತ್ನಿಸಿದಾಗ ಇವರು ಅದನ್ನು ಬಿಡಿಸಿದರೆಂದು ವಿಜಯದಾಸರು ಸ್ತೋತ್ರ ಮಾಡಿದ್ದಾರೆ." ನ್ಯಾಯ ಸುಧೆಯೆಂಬ ಅತಿ ಪ್ರಸಿದ್ಧವಾದ ಮಾಧ್ವಗ್ರಂಥಕ್ಕೆ ಇವರು "ವಾಗ್ವಜ್ರ" ವೆಂಬ ವ್ಯಾಖ್ಯಾನವನ್ನು ರಚಿಸಿದರು. ಆ ನಂತರ ಇವರು ವ್ಯಾಸರಾಜರನ್ನು ಚಂದ್ರಗಿರಿಯ ನರಸಿಂಹನ ಆಸ್ಥಾನಕ್ಕೆ ಕಳುಹಿಸಿದರು. ಇವರಿಗೆ ರಂಗವಿಠಲನು ಸಂಪುಟದಲ್ಲಿ ಒಲಿದಿದ್ದರಿಂದ ಇವರು ರಚಿಸಿರುವ ಕನ್ನಡ ಕೃತಿಗಳಿಗೆ "ರಂಗವಿಠಲ" ನೆಂಬ ಅಂಕಿತ ಹಾಕಿದ್ದಾರೆ.


ಶ್ರೀಪಾದರಾಜರು ಕನ್ನಡ ದಾಸಸಾಹಿತ್ಯ ಪೋಷಣೆಗೆ ಮುಖ್ಯಕಾರಣರು. ಇವರ ಪದಗಳು ಹೆಚ್ಚಾಗಿ ಸಿಕ್ಕಲ್ಲ. ಇವರ ಪದಗಳೆಲ್ಲ ರಸ ಪುಷ್ಟವಾಗಿವೆ. ಶೈಲಿಯು ಸರಳವಾಗಿದ್ದು ಮನನಾಟುವಂತಿದೆ. ಕನ್ನಡ ಭಾಷೆಯು ಬಹಳ ಲಲಿತವಾಗಿದ್ದರೂ ಬಿಕ್ಕಟ್ಟಾಗಿದೆ. ಅಲಂಕಾರ ಜೋಡಣೆಯು ಸಂದರ್ಭೋಚಿತವಾಗಿದೆ. ಇವರು ರಚಿಸಿರುವ ಪದಗಳಲ್ಲಿ ದೈನ್ಯವೂ, ದೇವರೊಡನೆ ಸರಸವೂ,ಭಗವನ್ಮಹಿಮಾ ವರ್ಣನೆಯೂ ಚೆನ್ನಾಗಿ ಚಿತ್ರಿತವಾಗಿದೆ. ಬರಿಯ ಬಿಡಿ ಪದಗಳಲ್ಲದೆ ಇವರು ಗೋಪೀಗೀತಾ ವೇಣುಗೀತಾ, ಭ್ರಮರಗೀತಾ, ಶ್ರೀಲಕ್ಷ್ಮೀ ನರಸಿಂಹ ಪ್ರಾದುರ್ಭಾವ ದಂಡಕ, ರುಕ್ಮಿಣಿ ಸತ್ಯಭಾಮಾ ವಿಲಾಸ ಮತ್ತು ಮಧ್ವನಾಮ' - ಈ ಕನ್ನಡ ಕಾವ್ಯಗಳನ್ನು ರಚಿಸಿದ್ದಾರೆ. ಇವರಿಂದ ಪೋಷಿತವಾದ ಕನ್ನಡ ದಾಸಸಾಹಿತ್ಯ ಸುಮಾರು ನೂರಿಪ್ಪತ್ತು ವರ್ಷಗಳು ಅವ್ಯಾಹತವಾಗಿ ಸಾಗಿ ಚೆನ್ನಾಗಿ ಪಸರಿಸಿ, ಅತ್ಯಂತ ತೇಜಸ್ವಿಗಳಾದ ಹರಿದಾಸರುಗಳನ್ನು ಒಟ್ಟಿಗೆ ನೀಡಿತು. ಇವರು ಕ್ರಿ.ಶ. 1480 ರ ಸುಮಾರಿಗೆ ಮುಳಬಾಗಿಲಿನಲ್ಲಿ ಕಾಲವಾದರು.


## ಚಿತ್ರಕಥೆ


# ಗಡಾರಿ ಮಾಡಿದ ಗಾಯ


**ಕಥೆ :**
ತೆಲುಗು ಮೂಲ : ಡಿ. ಶ್ರೀನಿವಾಸ ಧೀಕ್ಷಿತರು
ಅನುವಾದ : ಶ್ರೀಮತಿ ಆರ್. ಕೃಷ್ಣವೇಣಿ
**ಚಿತ್ರಗಳು :** ಕೆ. ದ್ವಾರಕನಾಥ್

ಪುಷ್ಪ ಪ್ರಿಯನು ಶ್ರೀ ವೆಂಕಟೇಶ್ವರನು. ಆದರೆ ಬೆಟ್ಟದ ಮೇಲೆ ಎಲ್ಲೂ ಸಮೃದ್ಧಿಯಾಗಿ ಹೂ ಗಳು ಸಿಗುತ್ತಿರಲಿಲ್ಲ. ಈ ಕೊರತೆಯನ್ನು ನೀಗಿಸಲು ಶ್ರೀ ರಾಮಾನುಜಚಾರ್ಯರು ಆಲೋಚಿಸಿ ತಮ್ಮ ಶಿಷ್ಯರನ್ನು ಕರೆದರು.




ನಾನು ಸಿದ್ಧವಾಗಿದ್ದೇನೆ ಆಚಾರ್ಯ !
ಕಂದನೇ ! ನಿನಗೆ ನನ್ನ ಮಂಗಳಾಶಾಸನಗಳು !!
ಹೆಂಡತಿಯನ್ನು ಜೊತೆಯಲ್ಲಿ ಕರೆದು ಕೊಂಡು ಬೆಟ್ಟಕ್ಕೆ ಸೇರಿದರು ಅನಂತಾ ಚಾರ್ಯರು. ತೋಟಕ್ಕಾಗಿ ನೀರಿನ ಅವಶ್ಯಕತೆ ಇರುವುದರಿಂದ ಮೊದಲು ಬಾವಿಯನ್ನು ಅಗೆಯಲು ಪ್ರಾರಂಭಿಸಿದರು. ಗಂಡ ಬಾವಿಯನ್ನು ಅಗೆಯುತ್ತಿದ್ದರೆ ಗರ್ಭವತಿಯಾದ ಹೆಂಡತಿ ಆ ಮಣ್ಣನ್ನು ಒಂದು ತಟ್ಟೆಯಲ್ಲಿ ಹಾಕಿಕೊಂಡು ಹೊರಗೆ ಚೆಲ್ಲುತ್ತಿದ್ದರು. ಅವರನ್ನು ನೋಡಿದ ಸ್ವಾಮಿಗೆ ಕರುಣೆಯುಂಟಾಗಿ ಬಾಲಕನ ವೇಷದಲ್ಲಿ ಬಂದು.....
ಅಯ್ಯಾ ! ನಾನು ಕೂಡ ಮಣ್ಣನನ್ನು ಹೊರುತ್ತೇನೆ.
ನಮಗೆ ಯಾರ ಸಹಾಯವು ಬೇಡ.. ಹೋಗು...
ಅಮ್ಮ ! ಆ ತಟ್ಟೆಯನ್ನು ಕೊಡಿ, ನಾನು ಹೊರುತ್ತೇನೆ.
ಸರಿ... ತೆಗೆದು ಕೋ ಕಂದನೇ ! ಈ ತಟ್ಟೆಯನ್ನು...


ತನ್ನ ಮಾತನ್ನು ಕೇಳದೆ ಮಣ್ಣನ್ನು ಹೊರುತ್ತಿರುವ ಬಾಲಕನನ್ನು ಗದರಿದನು ಅನಂತನು
ನಮಗೆ ನಿನ್ನ ಸಹಾಯ ಬೇಕಿಲ್ಲ.... ಇಲ್ಲಿಂದ ನೀನು ಹೋಗುತ್ತೀಯಾ... ಇಲ್ಲವಾ...!!
ಒಡೆಯುತ್ತೀಯ ಏನು ?
ಅನ್ನುತ್ತಾ... ಆನಂದ ನಿಲಯದ ಕಡೆಗೆ ಹೊರಟನು ಆ ಬಾಲಕ
ಏ ಬಾಲಕ ನಿಲ್ಲು ... ನಿಲ್ಲು ಎನ್ನುತ್ತಾ ಕೋಪದಿಂದ ಗಡಾರಿ ಯನ್ನು ಎಸೆದನು ಅನಂತನು
ತಾತಾ ! ನಾನು ನಿಲ್ಲು ವುದಿಲ್ಲ..ನಿಲ್ಲುವುದಿಲ್ಲ..
ಅನಂತಾಚಾರ್ಯರು ಎಸೆದ ಗಡಾರಿ ಬಾಲಕನ ಗಲ್ಲ (ಗಡ್ಡ) ಕ್ಕೆ ತಾಕಿ ರಕ್ತವು ಸುರಿಯಿತು.
ಅಯ್ಯೋ ! ನೋವು ..ನೋವು...
ಆಲಯದೊಳಗೆ ಓಡಿ ಹೋದನು ಬಾಲಕ. ಆತನ ಹಿಂದೆಯೇ ಅನಂತನು ಹೋದನು. ಬಾಲಕ ಕಾಣಿಸಲಿಲ್ಲ. ಎದುರಿಗೆ ರಕ್ತವು ಸುರಿಯುತ್ತಿರುವ ಗಾಯದೊಂದಿಗೆ ಸ್ವಾಮಿಯವರು ಕಾಣಿಸಿದರು
ಸ್ವಾಮಿ ! ನಿನ್ನನ್ನಾ ನಾನು ಹೊಡೆದದ್ದು ನಾನು ಪಾಪಾತ್ಮನು...


ಸ್ವಾಮಿ! ಅಪಚಾರ ನಡೆದಿದೆ...
ನನ್ನನ್ನು ಶಿಕ್ಷಿಸಿ !
ಅನಂತಾ!
ನೀನು ಚಿಂತಿಸಬೇಡ
ಈ ಗಾಯವು ನಿನ್ನ
ಭಕ್ತಿಗೆ ನಿದರ್ಶನವಾಗಿರುತ್ತದೆ.
ಅಷ್ಟರಲ್ಲಿ ಅರ್ಚಕರು ಬಂದು ಸ್ವಾಮಿಯವರ ಗಡ್ಡಕ್ಕೆ ಪಚ್ಚ ಕರ್ಪೂರವನ್ನು ಅದ್ದಿದರು. ರಕ್ತವು ಸುರಿಯುವುದು ನಿಂತಿತು.
ಅನಂತಾ! ನನ್ನ ಗಡ್ಡದ ಮೇಲಿರುವ ಪಚ್ಚ ಕರ್ಪೂರದ ಚುಕ್ಕೆಯನ್ನು ನೋಡಿ ಮುಂಬರುವ ಪೀಳಿಗೆಯವರು ನಿನ್ನ ಅನನ್ಯ ಭಕ್ತಿಯನ್ನು ಕೀರ್ತಿಸುತ್ತಾರೆ.
ಆನಂದದಿಂದ ಅನಂತನ ಕುಟುಂಬವು ಭಕ್ತಿಯಿಂದ ಸ್ವಾಮಿಯವರಿಗೆ ನಮಸ್ಕರಿಸಿದರು.
ಓಂ ನಮೋ ವೆಂಕಟೇಶಾಯ
ಮುಂಬರುವ ಸಂಚಿಕೆಯಲ್ಲಿ ಶ್ರೀ ವೆಂಕಟೇಶ್ವರನ ಮತ್ತೊಂದು ದಿವ್ಯಲೀಲಾ ವಿಲಾಸಂ..... ಸ್ವಸ್ತಿ !

ನೀತಿಪಾಠ

# ಪರೋಪಕಾರ

– ಕೆ. ನರಸಿಂಹಮೂರ್ತಿ

ಎಲ್ಲರ ಪಾಪಗಳನ್ನು ತೊಳೆವವಳು ಗಂಗಾಮಾತೆ. ಆದರೆ ಎಲ್ಲರ ಪಾಪಗಳನ್ನು ತನ್ನಲ್ಲಿಟ್ಟುಕೊಂಡರೂ ಪರಮಪವಿತ್ರಳೆಂದು ಕರೆಸುಕೊಳ್ಳುವ ಗಂಗೆ ತನ್ನ ಪಾಪಗಳನ್ನು ತೊಳೆದುಕೊಳ್ಳುವ ಬಗೆಯಾದರೂ ಹೇಗೆ? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ.ಗಂಗೆ ತಾನೇ ಹೇಳಿಕೊಂಡಂತೆ "ಪರರ ಆಸ್ತಿ, ಪರಸ್ತ್ರೀಗೆ ಆಶಿಸದೇ, ಯಾರಿಗೂ ಮೋಸವನ್ನು ಮಾಡದಿರುವ ಹಾಗೂ ತಮ್ಮೆಲ್ಲವನ್ನು ಪರೋಪಕಾರಕ್ಕಾಗಿ ಮೀಸಲಿಡುವ ಜನ ತನ್ನಲ್ಲಿ ಸ್ನಾನ ಮಾಡಿದರೆ ಅವರ ಪುಣ್ಯದಿಂದ ತನ್ನಲ್ಲಿರುವ ಪಾಪಗಳು ನಶಿಸಿ ನಾನು ಶುದ್ಧಳಾಗುತ್ತೇನೆ" ಅಂದರೆ ಅಷ್ಟು ಮಹತ್ವ ಪರೋಪಕ್ಕಾರಕ್ಕಿದೆ. ಅದಕ್ಕೆ ಮಿಗಿಲಾದ ಧರ್ಮ ಮತ್ತೊಂದಿಲ್ಲ. ಮಕ್ಕಳಿಗೆ ಯಾವುದು ಕೆಟ್ಟದ್ದು ಯಾವುದು ಒಳ್ಳೆಯದೆಂದು ತಿಳಿ ಹೇಳುವುದು ನಮ್ಮೆಲ್ಲರ ಕರ್ತವ್ಯ. ಹಾಗಾದರೆ ಒಳ್ಳೆಯದೆಂಬುದು ಯಾವುದೆಂಬ ಪ್ರಶ್ನೆ ನಮ್ಮಲ್ಲಿ ಉದ್ಭವಿಸುತ್ತದೆ. ಇತರರ ಏಳಿಗೆಗೆ ಅಸೂಯೆ ಪಡದಿರುವುದು ಮತ್ತು ಇತರರ ವಸ್ತುವನ್ನು ಅಪಹರಿಸದಿರುವಂತಹ ಅನಾದಿ ಗುಣಗಳೇ ನಮ್ಮನ್ನು ಒಳಿತಿನೆಡೆಗೆ ಕೊಂಡೊಯ್ಯುತ್ತವೆ. ಅಂತಹ ಸದಾಚಾರಿಗಳು ಸಮಾಜದಲ್ಲಿ ಶಾಂತಿಯನ್ನಿರಿಸಬಲ್ಲದೊಂದೇ ಅಲ್ಲದೇ ಗಂಗೆಯನ್ನೇ ಪರಮ ಪಾವಿತ್ರ್ಯಳನ್ನಾಗಿಸಬಲ್ಲರು.ಅದಕ್ಕೊಂದು ನಿದರ್ಶನ ನಮ್ಮ ವಾಲ್ಮೀಕಿ ರಾಮಾಯಣದಲ್ಲಿ ಕಾಣಸಿಗುತ್ತದೆ.

ಸೀತೆಯನ್ನು ರಾವಣ ಅಪಹರಿಸುವಾಗ ಆತನ ಖಡ್ಗಕ್ಕೆ ತುತ್ತಾಗಿ ತನ್ನ ರೆಕ್ಕೆಯನ್ನೇ ಕಳೆದುಕೊಂಡು ನೆಲಕ್ಕುರುಳಿದ ಜಟಾಯು ನಮ್ಮಲ್ಲೆರಿಗೂ ಚಿರಪರಿಚಿತ. ಆತನ 'ಪರೋಪಕಾರ ಪ್ರಜ್ಞೆ' ನಮ್ಮೆಲ್ಲರನ್ನು ಮೂಕ ವಿಸ್ಮಿತರನ್ನಾಗಿ ಮಾಡುತ್ತದೆ.ಅದು ಜಟಾಯುವಿಗೆ ಕಲಿಸಿಕೊಟ್ಟದ್ದು ಆತನ ಅಣ್ಣ ಸಂಪಾತಿ.ಸಂಪಾತಿ-ಜಟಾಯು-ಅಣ್ಣತಮ್ಮಂದಿರು ಒಮ್ಮೆ ಆಕಾಶದಲ್ಲಿ ಆನಂದದಿಂದ ವಿಹರಿಸುವಂಥವರು. ಅಂಥವರಿಬ್ಬರ ಮಧ್ಯೆ



ಯೊಮ್ಮೆ ಸ್ಪರ್ಧೆ ಏರ್ಪಟ್ಟಿದೆ. ಯಾರು ಸೂರ್ಯಮಂಡಲ ದವರೆಗೂ ಮೊದಲು ಹಾರ ಬಲ್ಲರೆಂದು ಪೈಪೋಟಿಗಿಳಿದಿದ್ದಾರೆ. ಜಟಾಯು ಹಾರುತ್ತಾ ಸೂರ್ಯಮಂಡಲದ ಸಮೀಪಕ್ಕೆ ಹಾರುತ್ತಲೇ ಆ ಶಾಖವು ತೀವ್ರಗೊಂಡು ರೆಕ್ಕೆಗಳೆಲ್ಲಾ ಹೊಗೆಯಾಡಿ ಜಟಾಯು ಆಯ ತಪ್ಪಿ ಭೂಮಿಗೆ ಬೀಳುವ ಪರಿಸ್ಥಿತಿ ತಲುಪಿದ್ದಾನೆ. ಅಷ್ಟರಲ್ಲಿ ಇದನ್ನು ಗಮನಿಸಿದ 'ಸಂಪಾತಿ' ಸ್ಪರ್ಧೆಯನ್ನು ಮರೆತು ತನ್ನ ರೆಕ್ಕೆಗಳನ್ನು ಅರಳಿಸಿ ಸೂರ್ಯಾನಿಗೂ ಜಟಾಯುವಿಗೂ ಮಧ್ಯೆ ಬಂದಿದ್ದಾನೆ. ಇದ್ದರಿಂದ ರೆಕ್ಕೆಯ ನೆರಳು ಜಟಾಯುವನ್ನಾವರಿಸಿ ಛತ್ರಿಯಂತೆ ಕೆಲಸ ಮಾಡಿದೆ. ಜಟಾಯು ಶಾಖದ ಬಾಧೆಯಿಂದ ತಪ್ಪಿಸಿಕೊಂಡು ತಂಪಾದ ಗಾಳಿ ಬೀಸುತ್ತಲೇ ಚೇತರಿಸಿಕೊಂಡಿದ್ದಾನೆ. ತಪ್ಪಿದ ಆಯ ಮರುಕಳಿಸಿದೆ. ಘಟಿಸಿಲಿದ್ದ ಅನಾಹುತ ತಪ್ಪಿದೆ ಆದರೆ ಸಂಪಾತಿಯ ರೆಕ್ಕೆಗಳು ಉರಿದು ಹೋಗಿವೆ. ಆತನು ವಿಂಧ್ಯೆ ಪರ್ವತದಲ್ಲೇ ಉಳಿದು ಬಿದ್ದಿದ್ದಾನೆ. ಸ್ಪರ್ಧೆಗಿಂತ ಸದ್ಗುಣ ದೊಡ್ಡದು. 'ಪರೋಪಕಾರಂ ಇದಂ ಶರೀರಂ' ಎನ್ನುವ ಪಾಠವನ್ನು ಜಟಾಯು ಅಣ್ಣನಿಂದ ಕಲಿತಿದ್ದಾನೆ. ಆ ಪಾಠವನ್ನೇ ಸೀತೆಯನ್ನು ರಾವಣ ಅಪಹರಿಸುವ ಸಮಯದಲ್ಲಿ ಅನ್ವಯಿಸಿದ್ದಾನೆ ಮಾತೆಯ ರಕ್ಷಣೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟಿದ್ದಾನೆ ಜಟಾಯು ಜೀವಿಸಲಿಲ್ಲ - ಆದರೆ ಇಡೀ ರಾಮಾಯಣಕ್ಕೆ ಜೀವ ತುಂಬಿದ್ದಾನೆ.ನಮ್ಮ ಜೀವಕ್ಕಿಂತ ನಾವು ಇತರರಿಗೆ ಕೊಡುವ ಜೀವನ ದೊಡ್ಡದು."ಪ್ರಾಣಕ್ಕಿಂತ ಪರೋಪಕಾರ ಮಿಗಿಲು" ಅಲ್ಲವೇ?

# ಪ್ರಜ್ಞಾವಂತ ಬಾಲಕ



**ಹೆಸರು :** ಇ. ಸಾಯಿ ಯಶಸ್ವಿ

**ತರಗತಿ : -** 5 ನೇ ತರಗತಿ

**ಹುಟ್ಟಿದ ದಿನಾಂಕ :** 18- 11-2009

**ತಂದೆಯ ಹೆಸರು :** ಇ. ವೆಂಕಟರಮೇಶ್, ಇಂಡಿಯನ್ ಆರ್ಮಿ

**ತಾಯಿಯ ಹೆಸರು :** ಡಿ. ಶ್ರೀದೇವಿ. ತಿ.ತಿ.ದೇ.

**ಶಾಲೆಯ ಹೆಸರು :** ಮೇಕ್ ಮೈ ಬೇಬಿ ಜಿನಿಯಸ್, ತಿರುಪತಿ

1. ವೇಮನ ಶತಕರತ್ನ - 3 ನೇ ತರಗತಿ

2. ಆವರ್ತ ಪಟ್ಟಿಯಲ್ಲಿರುವ 118 ಮೂಲಕ ವಿಷಯಜ್ಞ - 4 ನೇ ತರಗತಿ

3. 108 ಯೋಗಾಸನದಲ್ಲಿ ಪ್ರವೀಣ - 4 ನೇ ತರಗತಿ

4. 100 ಮಗ್ಗಿಯಲ್ಲಿ ಗುಣೋತ್ತಮ - 4 ನೇ ತರಗತಿ

5. 100 ಕ್ಕೂ ಮೇಲೆ ಒರಿಗಾಮಿ ವಂಡರ್ ಕಿಡ್ - 4 ನೇ ತರಗತಿ

6.ಟಾನ್ ಗ್ರಾಮ್ ವಂಡರ್ ಕಿಡ್ - 4 ನೇ ತರಗತಿ

7. ಜಿನಿಯಸ್ ಬುಕ್ ಆಫ್ ರಿಕಾರ್ಡ್ಸ್

100 ವೇಮನ ಪದ್ಯಗಳು - 100 ಮಂದಿ - 25 ನಿಮಿಷಗಳು - 01 -06 -2016

100 ವೇಮನ ಪದ್ಯಗಳು - 200 ಮಂದಿ - 25 ನಿಮಿಷಗಳು - 05 -06 -2017

100 ವೇಮನ ಪದ್ಯಗಳು - 300 ಮಂದಿ - 25 ನಿಮಿಷಗಳು - 03 -06 -2018

8. ವಂಡರ್ ಬುಕ್ ಆಫ್ ರಿಕಾರ್ಡ್ಸ್

100 ವೇಮನ ಪದ್ಯಗಳು - 300 ಮಂದಿ - 03 -06 -2018

1) ರೂಬಿಕ್ಯೂಬ್ 2) ಜಗಿಕಿಂಗ್ ಬಾಲ್ಸ್ 3) ಮೈಕ್ರೊ ಆರ್ಟ್ 4) ಡ್ರಾಯಿಂಗ್ 5) ಸ್ಕೇಟಿಂಗ್ 6) ಭಗವದ್ಗೀತೆ 7) ವಿಷ್ಣು ಸಹಸ್ರನಾಮಗಳು 8) ಗೋವಿಂದ ನಾಮಗಳು 9) ಲಿಂಗಾಷ್ಟಕಂ 10) ಬ್ರಿತ್ ಲೆಸ್ ಸಾಂಗ್

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

1) ಶ್ರೀರಾಮನು ಯಾವ ವಂಶದಲ್ಲಿ ಜನಿಸಿದನು?

ಅ) ಚಂದ್ರವಂಶ ಆ) ಇಂದ್ರವಂಶ

ಇ) ರಾಜವಂಶ ಈ) ಸೂರ್ಯ ವಂಶ

2) ಸೂರ್ಯ ವಂಶಕ್ಕೆ ಇರುವ ಮತ್ತೊಂದು ಹೆಸರೇನು?

ಅ) ಇಕ್ಷ್ವಾಕುವಂಶ ಆ) ಶುಕ್ರವಂಶ

ಇ) ಚಕ್ಷುವಂಶ ಈ) ರಘುವಂಶ

3) ರಾವಣನು ಸೀತಾದೇವಿಯನ್ನು ಇರಿಸಿದ ವನ ಯಾವುದು?

ಅ) ಖಾಂಢವ ವನ ಆ) ಅಶೋಕ ವನ

ಇ) ನಾರಾಯಣವನ ಈ) ಬೃಂದಾವನ

4) ಮಹಾವಿಷ್ಣುವಿನ ಎಂಟನೆಯ ಅವತಾರ ಯಾವುದು?

ಅ) ಶ್ರೀರಾಮ ಆ) ಶ್ರೀ ಪರಶುರಾಮ

ಇ) ಶ್ರೀ ಕೃಷ್ಣ ಈ) ಶ್ರೀ ನಾರಸಿಂಹ

5) ಶ್ರೀ ರಾಮನಿಗೆ, ಸೀತೆಯನ್ನು ಹುಡುಕಲು ಸಹಕರಿಸಿದ ವಾನರ ರಾಜ ಯಾರು?

ಅ) ವಾಲಿ ಆ) ಸುಗ್ರೀವ

ಅ) ಹನುಮಂತ ಈ) ಅಂಗದ

6) ವಾನರರ ರಾಜ್ಯದ ಹೆಸರೇನು?

ಅ) ನಳಂದ ಆ) ಕಾಳಿಂಗ

ಇ) ಶ್ರೀಲಂಕ ಈ) ಕಿಷ್ಕಿಂದೆ

7) ರಾವಣನ ಪಟ್ಟದ ರಾಣಿಯ ಹೆಸರೇನು?

ಅ) ದ್ರೌಪದಿ ಆ) ಮಡೋದರಿ

ಇ) ಕುಂತಿ ಈ) ಸುಮಿತ್ರ


• • • • • • • • • • • •

ಉತ್ತರಗಳು:

1) ಈ 2) ಅ 3) ಆ 4) ಇ 5) ಆ 6) ಈ 7) ಆ

# ಚಿತ್ರಲೇಖನ

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**



**ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



ಬ್ರಹ್ಮೋತ್ಸವಗಳಲ್ಲಿ ಬಾಲ ಕಲಾಕಾರರು

**SAPTHAGIRI (KANNADA) ILLUSTRATED MONTHLY Published by Tirumala Tirupati Devasthanams printing on 25-03-2020. Regd. with the Registrar of Newspapers under "RNI" No.10742. Postal Regd.No.TRP/14- 2018-2020, Licensed to post without prepayment No.PMGK/RNP/WPP-04/2018-2020**




ಅಂಜನೀಸುತನು